ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಫೈಲುಗಳ ಶೀಘ್ರ ವಿಲೇವಾರಿ

1278 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಡಳಿತದಲ್ಲಿ ಸರಳೀಕರಣ ತರಲು ಫೈಲುಗಳ ಶೀಘ್ರ ವಿಲೇವಾರಿಗೆ, ಸಾರ್ವಜನಿಕ ಸಂಪರ್ಕ ಬರುವ ಇಲಾಖೆಗಳಲ್ಲಿ ನಾಗರೀಕ ಸಲಹಾ ಸಮಿತಿ ನೇಮಕ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಆಡಳಿತ ಸುಧಾರಣೆಗೆ ಸರ್ಕಾರ ಕೈಗೊಳ್ಳುವ ವಿಶೇಷ ಕಾರ್ಯಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) ಸರ್ಕಾರದ ಮುಂದೆ ಈ ಪ್ರಸ್ತಾವನೆ ಇರುವುದಿಲ್ಲ.

ಆ)

1. ಸರ್ಕಾರದ ಕಾರ್ಯದರ್ಶಿಗಳು ಹಾಗೂ ಕ್ಷೇತ್ರೀಯ ಇಲಾಖಾ ಅಧಿಕಾರಿಗಳು ಪ್ರತಿ ತಿಂಗಳೂ ತಪ್ಪದೇ ರಾಜ್ಯ ವಿವಿಧ ಕ್ಷೇತ್ರಗಳಿಗೆ ಪ್ರವಾಸ ಮಾಡಿ ಇಲಾಖೆಗಳ ತಪಾಸಣೆ ನಡೆಸಿ ಕಾರ್ಯವಿಳಂಬವನ್ನು ತಡೆಯುವ ಹಾಗೂ ಜನ ಸಾಮಾನ್ಯರ ಕುಂದುಕೊರತೆಗಳನ್ನು ನಿವಾರಿಸಿ ಪರಿಹಾರ ನೀಡಬೇಕೆಂದು ಸೂಚಿಸಲಾಗಿದೆ.

2. ಸಚಿವಾಲಯದ ಇಲಾಖೆಗಳು ಮತ್ತು ವಿವಿಧ ಇಲಾಖಾ ಮುಖ್ಯಸ್ಥರುಗಳ ಹಾಗೂ ಜಿಲ್ಲಾಧಿಕಾರಿಗಳು ಮತ್ತು ಅವರ ಅಧೀನದಲ್ಲಿ ಬರುವ ತಾಲ್ಲೂಕು ಕಛೇರಿಗಳಲ್ಲಿನ ಕಡತ ವಿಲೇವಾರಿಗಳ ಬಗ್ಗೆ ವರದಿಗಳನ್ನು ಸಚಿವ ಸಂಪುಟದ ಮುಂದೆ ಸಮೀಕ್ಷೆಗಾಗಿ ಪ್ರತಿ ಮಾಹೆಯು ಮಂಡಿಸಲಾಗುತ್ತಿದೆ.

ಬಾಕಿ ಉಳಿದಿರುವ ಕಡತಗಳ ಶೀಘ್ರ ವಿಲೇವಾರಿಗಾಗಿ 1988ರ ಏಪ್ರಿಲ್ ಮತ್ತು ಮೇ ತಿಂಗಳುಗಳನ್ನು 'ಕಡತ ವಿಲೇವಾರಿ ಮಾಸಿಕಗಳನ್ನಾಗಿ ಆಚರಿಸಲು ಸರ್ಕಾರವು ನಿರ್ಧರಿಸಿ, ಒಂದು ವರ್ಷದ ಅವಧಿ ಮೀರಿದ ಕಡತಗಳನ್ನು ವಿಲೇವಾರಿ ಮಾಡಲು ಸೂಚಿಸಲಾಗಿದೆ.

ಈ ಅವಧಿಯಲ್ಲಿ ಕಡತ ವಿಲೇವಾರಿ ಆಂದೋಲನದ ಚಟುವಟಿಕೆಗಳ ಮೇಲೆ ನಿಗಾ ಇಡಲು ಹಾಗೂ ಪ್ರಗತಿಯನ್ನು ಪರಿಶೀಲಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ವಿಚಾರಣಾ ದಳವನ್ನು ನೇಮಿಸಲಾಗಿದೆ. ಈ ದಳವು ಸರ್ಕಾರದ ವಿವಿಧ ಇಲಾಖಾ ಮುಖ್ಯಸ್ಥರ

ಹಾಗೂ ಅಧೀನ ಕಛೇರಿಗಳ ಅನಿರೀಕ್ಷಿತ ಭೇಟಿ ನೀಡಿ, ನೌಕರರ ಹಾಜರಾತಿ, ಸಮಯ ಪರಿಪಾಲನೆ ಹಾಗೂ ವಿಲೇವಾರಿ ಇವುಗಳ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮವಹಿಸಲು ಸೂಚಿಸಲಾಗಿದೆ.

ರಾಜ್ಯದಲ್ಲಿ ಭಾರಿ ನೀರಾವರಿ ಯೋಜನೆಗಳು.

1280 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಸಣ್ಣ ನೀರಾವರಿ ಯೋಜನೆಗಳು ಯಾವುವು?*

ಆ) *ಸದರಿ ಈ ಸಣ್ಣ ನೀರಾವರಿ ಯೋಜನೆಯಡಿಯಲ್ಲಿ ಬರುವ ಜಿಲ್ಲೆ ತಾಲ್ಲೂಕುಗಳು ಯಾವುವು?*

ಇ) *ಈ ಯೋಜನೆಯಡಿಯಲ್ಲಿ ಬರುವ ಪ್ರದೇಶದ ಒಟ್ಟು ವಿಸ್ತೀರ್ಣ ಎಷ್ಟು?*

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಸಣ್ಣ ನೀರಾವರಿ ಅಡಿಯಲ್ಲಿ ಕೆರೆಗಳು, ಅಣೆಕಟ್ಟು ಪಿಕಪ್‌ಗಳು, ಬಂದಾರಗಳು ಹಾಗೂ ಏತ ನೀರಾವರಿ ಯೋಜನೆಗಳು ಇರುತ್ತವೆ. ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.

ಆ) ವಿವರವನ್ನು ಅನುಬಂಧ-2ರಲ್ಲಿ ನೀಡಿದೆ.

ಇ) ಸಣ್ಣ ನೀರಾವರಿ ಅಡಿಯಲ್ಲಿ 40843 ಯೋಜನೆಗಳಿದ್ದು, 9,16,267 ಹೆಕ್ಟೇರ್ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತದೆ.